1

# ವರ್ತನೆಯ ಕಾರಣಗಳು

ಜನರು ತಾವು ನಡೆದುಕೊಳ್ಳುವ ರೀತಿಯಲ್ಲಿಯೇ ಏಕೆ ವರ್ತಿಸುತ್ತಾರೆ? ಅದು ಮೊದಲು ಬಹುಶಃ ಒಂದು ವ್ಯಾವಹಾರಿಕ ಪ್ರಶ್ನೆಯಾಗಿತ್ತು.: ಯಾವುದೇ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯು ಏನನ್ನು ಮಾಡಬಹುದು ಎಂಬುದನ್ನುನಿರೀಕ್ಷಿಸಿ ಅದಕ್ಕೆ ತಕ್ಕಂತೆ ಹೇಗೆ ಸಿದ್ಧತೆ ಮಾಡಿಕೊಳ್ಳಬಹುದು? ತರುವಾಯ ಇದು ಮತ್ತೊಂದು ಅರ್ಥದಲ್ಲಿ ವ್ಯಾವಹಾರಿಕವಾಯಿತು: ಒಬ್ಬ ವ್ಯಕ್ತಿಯನ್ನು ನಿರ್ದಿಷ್ಟ ರೀತಿಯಲ್ಲಿಯೇ ವರ್ತಿಸಲು ಹೇಗೆ ಪ್ರೇರೇಪಿಸಬಹುದು? ಕ್ರಮೇಣವಾಗಿ ಅದು ವರ್ತನೆಯನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ವಿಷಯವಾಯಿತು ಮತ್ತು ಅದನ್ನು ಯಾವತ್ತೂ ಕಾರಣಗಳ ಬಗೆಗಿನ ಒಂದು ಪ್ರಶ್ನೆಯಾಗಿ ಸೀಮಿತಗೊಳಿಸಬಹುದು.

ನಾವು ಬಹಳಷ್ಟು ಸಲ ದುಡುಕಿ ಹೇಳುವುದೇನೆಂದರೆ, ಒಂದು ಮತ್ತೊಂದನ್ನು ಅನುಸರಿಸುತ್ತದೆ ಎಂದಾದಲ್ಲಿ ಬಹುಶಃ ಅದೇ ಕಾರಣವಾಗಿರಬಹುದು – ಬಹಳ ಕಾಲದಿಂದಲೂ ಬಳಕೆಯಲ್ಲಿರುವ ನಿಯಮವನ್ನು ಬಳಸುವುದಾದರೆ ಪೋಸ್ಟ್ ಹಾಕ್, ಎರ್ಗೋ ಪ್ರೊಪ್ಟರ್ ಹಾಕ್ (post hoc, ergo propter hoc – ಇದಾದನಂತರ, ಆದ್ದರಿಂದ ಇದರಿಂದಲೇ). ಮಾನವನ ವರ್ತನೆಯನ್ನು ವಿವರಿಸುವಲ್ಲಿ ಲಭ್ಯವಿರುವ ಹಲವಾರು ಉದಾಹರಣೆಗಳಲ್ಲಿ ಒಂದು ಇಲ್ಲಿ ಬಹಳ ಮುಖ್ಯವಾಗುತ್ತದೆ. ನಮಗೆ ಬಹಳ ಚಿರಪರಿಚಿತವಾಗಿರುವ ವ್ಯಕ್ತಿ ಎಂದರೆ ನಾವೇ: ನಾವು ವರ್ತಿಸುವ ಮುನ್ನ ನಾವು ಗಮನಿಸುವ ಬಹಳಷ್ಟು ಅಂಶಗಳು ನಮ್ಮ ಶರೀರದಲ್ಲೇ ಸಂಭವಿಸುತ್ತದೆ ಮತ್ತು ಅವುಗಳನ್ನು ನಮ್ಮ ವರ್ತನೆಗೆ ಕಾರಣಗಳೆಂದು ಪರಿಗಣಿಸುವುದು ಬಹಳ ಸಹಜ. ನಾವು ನಮ್ಮ ಸ್ನೇಹಿತನೊಬ್ಬನ ಜೊತೆ ಏಕೆ ತೀಕ್ಷ್ಣವಾಗಿ ಮಾತನಾಡಿದೇವೆಂದು ಕೇಳಿದರೆ, ನಾವು ನೀಡುವ ಪ್ರತಿಕ್ರಿಯೆ, "ಏಕೆಂದರೆ ನನಗೆ ಕೋಪ ಬಂದಿತ್ತು". ಮೊದಲು ಅಥವಾ ನಾವು ಮಾತನಾಡುವ ಸಮಯದಲ್ಲಿ ನಮಗೆ ಕೋಪ ಬಂದಿದ್ದು ನಿಜ, ಆದ್ದರಿಂದ ನಮ್ಮ ನಿಂದನೆಗೆ ನಮ್ಮ ಕೋಪವೇ ಕಾರಣವೆಂದು ತಿಳಿಯುತ್ತೇವೆ. ನಾವು ರಾತ್ರಿ ಊಟ ಏಕೆ ಮಾಡುತ್ತಿಲ್ಲವೆಂದು ಕೇಳಿದರೆ, "ಏಕೆಂದರೆ, ನನಗೆ ಹಸಿವಾಗುತ್ತಿಲ್ಲ"ವೆಂದು ನಾವು ಹೇಳಬಹುದು. ಸಾಮಾನ್ಯವಾಗಿ, ನಾವು ಊಟ ಮಾಡಬೇಕಾದರೆ ನಮಗೆ ಹಸಿವಾಗಿರುತ್ತದೆ. ಹಸಿವಾಗುತ್ತಿರುವುದರಿಂದ ನಾವು ಊಟ ಮಾಡುತ್ತೇವೆಂದು ನಿರ್ಣಯಿಸುತ್ತೇವೆ. ಈಜಲು ಏಕೆ ಹೋಗುತ್ತೀರೆಂದು ಕೇಳಿದರೆ, "ಏಕೆಂದರೆ ನನಗೆ ಈಜುವುದೆಂದರೆ ಇಷ್ಟ"ವೆಂದು ಉತ್ತರಿಸುತ್ತೇವೆ. "ನನಗೆ ಈ ಮೊದಲು ಇದೇ ರೀತಿ ಅನ್ನಿಸಿದ್ದಾಗ ನಾನೂ ಅದೇ ರೀತಿಯಲ್ಲಿಯೇ ವರ್ತಿಸಿದ್ದೇನೆ" ಎಂದು ನಾವು ಹೇಳುತ್ತಿರುವಂತೆ ಭಾಸವಾಗುತ್ತದೆ. ಭಾವನೆಗಳು ಸರಿಯಾದ ಸಮಯದಲ್ಲಿ ಸಂಭವಿಸಿ, ವರ್ತನೆಗಳಿಗೆ ಕಾರಣಗಳಾಗುತ್ತವೆ ಎಂಬ ಹೇಳಿಕೆ ಶತಮಾನಗಳ ಕಾಲದಿಂದ ಉಲ್ಲೇಖಿಸಲ್ಪಟ್ಟಿದೆ. ಇತರೇ ವ್ಯಕ್ತಿಗಳು ನಾವು ವರ್ತಿಸುವ ರೀತಿಯಲ್ಲಿಯೇ ವರ್ತಿಸಿದರೆ ಅವರೂ ಸಹ ನಾವು ಹೊಂದಿರುವ ಭಾವನೆಯನ್ನೇ ಹೊಂದಿದ್ದಾರೆ ಎಂದು ಊಹಿಸುತ್ತೇವೆ.

ಮನಸ್ಸಿನ ಈ ಭಾವನೆಗಳು ಮತ್ತುಮಾನಸಿಕಸ್ಥಿತಿಗಳು ಎಲ್ಲಿವೆ? ಅವುಗಳು ಏನನ್ನು ಒಳಗೊಂಡಿರುತ್ತವೆ? ಸಾಂಪ್ರದಾಯಿಕ ಉತ್ತರವೆಂದರೆ, ಅವುಗಳು ಮನಸ್ಸು ಎಂದು ಕರೆಯಲ್ಪಡುವ ಅಲೌಕಿಕ ಪ್ರಪಂಚದ ಆಯಾಮಗಳಲ್ಲಿ ಸ್ಥಾಪಿತವಾಗಿವೆ, ಹಾಗೂ ಅವುಗಳೆಲ್ಲವೂ ಮಾನಸಿಕವಾಗಿವೆ. ಆದರೆ, ಆಗ ಮತ್ತೊಂದು ಪ್ರಶ್ನೆ ಉದ್ಭವವಾಗುತ್ತದೆ: ಒಂದು ಮಾನಸಿಕ ಘಟನೆ ಲೌಕಿಕ ಘಟನೆಯೊಂದನ್ನು ಸೃಷ್ಟಿಸಬಲ್ಲದೇ ಅಥವಾ ಲೌಕಿಕ ಘಟಣೆಯೊಂದರಿಂದ ಮಾನಸಿಕ ಘಟನೆಯೊಂದು ಸೃಷ್ಟಿಯಾಗಬಲ್ಲದೇ? ವ್ಯಕ್ತಿಯೊಬ್ಬನು ಏನನ್ನು ಮಾಡುತ್ತಾನೆಂದು ಊಹಿಸಬೇಕೆಂದರೆ, ಆ ವ್ಯಕ್ತಿಯ ವರ್ತನೆಗೆ ಕಾರಣವಾದ ಮಾನಸಿಕ ಅಂಶಗಳನ್ನು ಹೇಗೆ ಕಂಡುಹಿಡಿಯಬಹುದು, ಮತ್ತು ಆ ವ್ಯಕ್ತಿಯು ನಿರ್ದಿಷ್ಟ ರೀತಿಯಲ್ಲಿ ವರ್ತಿಸುವಂತೆ ಮಾಡುವ ಭಾವನೆಗಳು ಮತ್ತು ಮಾನಸಿಕ ಸ್ಥಿತಿಯನ್ನು ಹೇಗೆ ಸೃಷ್ಟಿಸಬಹುದು? ಉದಾಹರಣೆಗೆ, ಒಂದು ಮಗುವು ಪೌಷ್ಟಿಕವಾದ, ಆದರೆ ಸ್ವಾದಿಷ್ಟವಲ್ಲದ ಆಹಾರವೊಂದನ್ನು ತಿನ್ನಬೇಕೆಂದು ನಾವು ಬಯಸಿದರೇ ಮತ್ತು ಆಗ ಬೇರೆ ಯಾವುದೇ ಆಹಾರವು ಲಭ್ಯವಿರದಂತೆ ನಾವು ಖಾತ್ರಿಪಡಿಸಿದಾಗ, ಅಂತಿಮವಾಗಿ ಮಗು ಅದನ್ನು ತಿನ್ನುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ, ಆಹಾರ ವಂಚಿತನಾದ (ಭೌತಿಕ ಘಟನೆ) ಮಗುವನ್ನು ನಾವು ಹಸಿವನ್ನು ಅನುಭವಿಸುವಂತೆ

(ಮಾನಸಿಕ ಸ್ಥಿತಿ) ಮಾಡಿದೆವು ಮತ್ತು ಇದರಿಂದಾಗಿ ಮಗುವು ಹಸಿವನ್ನು ಅನುಭವಿಸಿ ಪೌಷ್ಟಿಕ ಆಹಾರವನ್ನು ಸೇವಿಸಿತು (ಭೌತಿಕ ಘಟನೆ). ಆದರೆ, ಹೇಗೆ ಭೌತಿಕ ಘಟನೆಯಾದ ಆಹಾರದಿಂದ ವಂಚಿತವಾದ ಸ್ಥಿತಿಯು ಹಸಿವಿನ ಅನುಭವವನ್ನು ಉಂಟು ಮಾಡಿತು? ಮತ್ತು ಈ ಭಾವನೆಯು ಪ್ರಾಶನ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಸ್ನಾಯುಗಳನ್ನು ಹೇಗೆ ಪ್ರೇರೇಪಿಸಿತು? ಇಂತಹ ಅನೇಕ ಇತರ ಯಕ್ಷ ಪ್ರಶ್ನೆಗಳಿವೆ.ಅವುಗಳನ್ನು ಹೇಗೆ ಪರಿಗಣಿಸಬೇಕು?

ನನ್ನ ಪ್ರಕಾರ, ಅವುಗಳನ್ನು ಕಡೆಗಣಿಸುವುದು ಸಾಮಾನ್ಯವಾದ ಅಭ್ಯಾಸ. ವರ್ತನೆಯು ಭಾವನೆಗಳನ್ನು ಅಭಿವ್ಯಕ್ತಗೊಳಿಸುತ್ತದೆ ಎಂಬುದನ್ನು ನಂಬಲು ಸಾಧ್ಯವಿದೆ; ವ್ಯಕ್ತಿಯೊಬ್ಬ ಏನು ಮಾಡುತ್ತಾನೆ ಎಂದು ಊಹಿಸುವ ಮೂಲಕ ಅಥವಾ ಅವನಿಗೆ/ ಅವಳಿಗೆ ಏನು ಅನ್ನಿಸುತ್ತಿದೆ ಎಂದು ಕೇಳುವುದರ ಮೂಲಕ ವ್ಯಕ್ತಿ ಏನು ಮಾಡುತ್ತಾನೆಂಬುದನ್ನು ನಿರೀಕ್ಷಿಸಬಹುದು. ಸೈದ್ಧಾಂತಿಕ ಸಮಸ್ಯೆಗಳಿಗೆ ಹೆಚ್ಚು ಗಮನ ನೀಡದೆ ಪರಿಸರದ ಬದಲಾವಣೆಯಿಂದ ಭಾವನೆಗಳನ್ನು ಬದಲಾಯಿಸಬಹುದು ಎಂಬ ಕಾರ್ಯತಂತ್ರವು ಯಾರಿಗೆ ಹಿತಕರವಾಗುವುದಿಲ್ಲವೋ ಅಂತಹವರು ಶರೀರ ವಿಜ್ಞಾನದ ಆಶ್ರಯ ಪಡೆಯುತ್ತಾರೆ. ಅಂತಿಮವಾಗಿ, ಮನಸ್ಸು ಶಾರೀರಿಕ ಆಧಾರವನ್ನು ಹೊಂದಿರುತ್ತದೆ ಎಂದು ಹೇಳಲಾಗುತ್ತದೆ. ಇತ್ತೀಚೆಗೆ ಒಬ್ಬ ಶಾಸ್ತ್ರಜ್ಞರು ಹೇಳಿದಂತೆ, "ಮಾನವನ ಯೋಚನೆಗಳಿಗೆ ಮಸ್ತಿಷ್ಕವು ಶಾರೀರಿಕ ಆಧಾರವನ್ನು ನೀಡುತ್ತದೆ ಎಂಬ ವಾಸ್ತವವನ್ನು ಈಗ ಪ್ರತಿಯೊಬ್ಬರೂ ಒಪ್ಪುತ್ತಾರೆ". ಬಹಳ ಸಂಕೀರ್ಣವಾದ ಮಾನಸಿಕ ಪರಿಕರವು ಶಾರೀರಿಕವಾದದ್ದು ಎಂದು ಫ್ರಾಯ್ಡ್‌ರವರು ನಂಬಿದ್ದರು. ಪ್ರಾರಂಭಿಕ ಅಂತರಾವಲೋಕನ ಮನೋವಿಜ್ಞಾನಿಗಳು ತಮ್ಮ ಕ್ಷೇತ್ರವನ್ನು ಶಾರೀರಿಕ ಮನೋವಿಜ್ಞಾನ ಎಂದು ಕರೆದರು. ಭೌತತ್ವವಾದ ಎಂದು ಕರೆಯಲ್ಪಡುವ ಜ್ಞಾನ ಮೀಮಾಂಸೆಯ ಪ್ರಕಾರ ನಾವು ಅಂತರಾವಲೋಕನ ಮಾಡಿದಾಗ ಅಥವಾ ಭಾವನೆಗಳನ್ನು ಹೊಂದಿದಾಗ ನಾವು ನಮ್ಮ ಮಸ್ತಿಷ್ಕದ ಸ್ಥಿತಿ ಅಥವಾ ಚಟುವಟಿಕೆಗಳನ್ನು ಅವಲೋಕಿಸುತ್ತಿರುತ್ತೇವೆ. ಆದರೆ, ಪ್ರಮುಖ ತೊಂದರೆಗಳು ವಾಸ್ತವದ್ದಾಗಿದೆ. ವ್ಯಕ್ತಿಯೊಬ್ಬನ ಭಾವನೆಗಳು ಅಥವಾ ಆತನ ನರಮಂಡಲವನ್ನು ನೇರವಾಗಿ ಅವಲೋಕಿಸುವುದರಿಂದ ಆತನು ಏನನ್ನು ಮಾಡುತ್ತಾನೆ ಎಂದು ನಿರೀಕ್ಷಿಸಲಾಗುವುದಿಲ್ಲ. ಹಾಗೂ ಮಸ್ತಿಷ್ಕ ಅಥವಾ ಮನಸ್ಸನ್ನು ಬದಲಿಸುವ ಮೂಲಕ ಆತನ ವರ್ತನೆಯನ್ನು ನಾವು ಬದಲಾಯಿಸಲಾಗುವುದಿಲ್ಲ. ಅದಾಗ್ಯೂ ಕೂಡ, ತಾತ್ವಿಕ ಸಮಸ್ಯೆಗಳನ್ನು ಕಡೆಗಣಿಸುವುದರಿಂದ ನಾವು ಯಾವುದೇ ದುಃಸ್ಥಿತಿಗೆ ಒಳಗಾಗುವುದಿಲ್ಲ ಎಂದು ಭಾಸವಾಗುತ್ತದೆ.

## ರಚನಾವಾದ

ಹೆಚ್ಚು ಸೂಕ್ತವಾದ ಕಾರ್ಯತಂತ್ರವೆಂದರೆ, ಕಾರಣಗಳ ಹುಡುಕುವುದನ್ನು ತ್ಯಜಿಸಿ ಜನರು ಏನು ಮಾಡುತ್ತಾರೆ ಎನ್ನುವುದನ್ನು ಮಾತ್ರ ವಿವರಿಸುವುದು. ಮಾನವಶಾಸ್ತ್ರಜ್ಞರು ಸಂಪ್ರದಾಯ ಮತ್ತು ನಡವಳಿಕೆಗಳ ವರದಿ ನೀಡಬಹುದು, ರಾಜ್ಯಶಾಸ್ತ್ರಜ್ಞರು "ವರ್ತನಾವಾದದ" ಆಧಾರದ ಮೇಲೆ ರಾಜಕೀಯ ಕ್ರಿಯೆಗಳನ್ನು ದಾಖಲಿಸಬಹುದು, ಅರ್ಥಶಾಸ್ತ್ರಜ್ಞರು ಮಾನವರು ಏನನ್ನು ಕೊಂಡುಕೊಳ್ಳುತ್ತಾರೆ ಮತ್ತು ಮಾರುತ್ತಾರೆ, ಬಾಡಿಗೆಗೆ ನೀಡುತ್ತಾರೆ ಮತ್ತು ಬಾಡಿಗೆಗೆ ಪಡೆಯುತ್ತಾರೆ, ಉಳಿತಾಯ ಮತ್ತು ವ್ಯಯ ಮಾಡುತ್ತಾರೆ ಹಾಗೂ ಉತ್ಪಾದಿಸುತ್ತಾರೆ ಮತ್ತು ಬಳಸುತ್ತಾರೆ ಎಂಬುದರ ಅಂಕಿ–ಅಂಶಗಳನ್ನು ಸಂಗ್ರಹಿಸಬಹುದು, ಮತ್ತು ಮನೋವಿಜ್ಞಾನಿಗಳು ಮನೋಭಾವ ಮತ್ತು ಅಭಿಪ್ರಾಯಗಳ ಮಾದರಿಯನ್ನು ನೀಡಬಲ್ಲರು. ಇವೆಲ್ಲವನ್ನೂ ಬಹುಶಃ ದಾಖಲಿಸುವ ಪರಿಕರಗಳನ್ನು ಬಳಸಿ ನೇರ ಅವಲೋಕನದ ಮೂಲಕ, ಹಾಗೂ ಸಂದರ್ಶನಗಳು, ಪ್ರಶ್ನಾವಳಿಗಳು, ಪರೀಕ್ಷೆಗಳು ಮತ್ತು ಸಮೀಕ್ಷೆಗಳ ಸಹಾಯದ ಮುಖಾಂತರ ಮಾಡಬಹುದಾಗಿದೆ. ಸಾಹಿತ್ಯ, ಕಲೆ ಮತ್ತು ಸಂಗೀತದ ಅಧ್ಯಯನವು ಕೆಲವೊಮ್ಮೆ ಮಾನವನ ವರ್ತನೆಯ ಈ ಅಂಶಗಳಿಗೆ ಸೀಮಿತವಾಗಿದೆ ಮತ್ತು ಭಾಷಾತಜ್ಞರು ಭಾಷಾ ಧ್ವನಿ ಶಾಸ್ತ್ರ, ಶಬ್ದಾರ್ಥ ಶಾಸ್ತ್ರ ಮತ್ತು ವಾಕ್ಯ ರಚನೆಗೆ ತಮ್ಮನ್ನು ಸೀಮಿತಗೊಳಿಸುತ್ತಾರೆ. ಜನರು ಮತ್ತೆ ಮತ್ತೆ ಮಾಡಿರುವಂತಹದ್ದನ್ನೇ ಮರಳಿ ಮಾಡುವ ಸಾಧ್ಯತೆಗಳಿರುತ್ತವೆ ಎಂಬ ಸಿದ್ಧಾಂತದ ಆಧಾರದ ಮೇಲೆ ಇಂತಹ ಊಹೆಯನ್ನು ಮಾಡಬಹುದು; ಜನರು ಸಂಪ್ರದಾಯವನ್ನು ಅನುಸರಿಸಲೇಬೇಕಾಗಿರುವುದರಿಂದ ಅದನ್ನು ಅನುಸರಿಸುತ್ತಾರೆ. ಅವರು ಮತ ಚಲಾಯಿಸುವ ಅಥವಾ ಕೊಂಡುಕೊಳ್ಳುವ ಅಭ್ಯಾಸಗಳನ್ನು ತೋರ್ಪಡಿಸುತ್ತಾರೆ, ಇತ್ಯಾದಿ. ಸಂಸ್ಕೃತಿ ಅಥವಾ ಭಾವನೆಗಳಲ್ಲಿನ "ಸಾರ್ವತ್ರಿಕತೆಗಳು", ಸಾಹಿತ್ಯದಲ್ಲಿನ ಮೂಲ ಮಾದರಿಗಳು, ಅಥವಾ ಮಾನಸಿಕ ಪ್ರಕಾರಗಳಂತಹ ವರ್ತನೆಯ ರಚನೆಗಳಲ್ಲಿನ ತತ್ವಗಳ ಅವಿಷ್ಕಾರ ಈ ಹಿಂದೆ ಸಂಭವಿಸದಂತಹ ವರ್ತನೆಯ ದೃಷ್ಟಾಂತಗಳನ್ನು ಊಹಿಸಲು ಸಾಧ್ಯವಾಗಿಸಬಹುದು.

ವರ್ತನೆಯ ರಚನೆ ಅಥವಾ ಸಂಯೋಜನೆಯನ್ನು ಕಾಲ ಅಥವಾ ವಯಸ್ಸಿನ ಚಟುವಟಿಕೆಯಾಗಿ ಸಹ ಅಭ್ಯಸಿಸಬಹುದು. ಇವುಗಳನ್ನು  ಮಗುವಿನ ಶಾಬ್ದಿಕ ವರ್ತನೆಯ ಬೆಳವಣಿಗೆ ಅಥವಾ ಆತನ ಸಮಸ್ಯಾ ಪರಿಹಾರ ಕಾರ್ಯತಂತ್ರಗಳು ಅಥವಾ ಶೈಶವಾವಸ್ಥೆಯಿಂದ ಪ್ರೌಢಾವಸ್ಥೆಯವರೆಗೂ ಅನುಕ್ರಮವಾಗಿ ವ್ಯಕ್ತಿಯು ಬೆಳವಣಿಗೆ ಹೊಂದುವುದು ಅಥವಾ ಸಂಸ್ಕೃತಿಯು ರೂಪುಗೊಳ್ಳುವ ಹಂತಗಳು ಇತ್ಯಾದಿಗಳ ಮೂಲಕ ಗಮನಿಸಬಹುದು.ಇತಿಹಾಸವು ಕಾಲಕ್ರಮೇಣ ಉಂಟಾಗುವ ಬದಲಾವಣೆಗಳಿಗೆ ಒತ್ತು ಕೊಡುತ್ತದೆ ಮತ್ತು ಬೆಳವಣಿಗೆ ಅಥವಾ ವಿಕಾಸದ ಮಾದರಿಗಳ ಅವಿಷ್ಕಾರವಾದಲ್ಲಿ ಮುಂದಿನ ಘಟನೆಗಳನ್ನು ಊಹಿಸುವಲ್ಲಿ ಸಹ ಅವುಗಳು ಸಹಾಯಕ ವಾಗಬಹುದು.

ನಿಯಂತ್ರಣವು ಮತ್ತೊಂದು ವಿಷಯವಾಗಿದೆ. ಕಾರಣಗಳತ್ತ ಗಮನ ಹರಿಸಲು ನಿರಾಕರಿಸುವ ಮೂಲಕ ಮನೋವಾದ (ಅಥವಾ "ಮನೋವಿಜ್ಞಾನವಾದ") ವನ್ನು  ತಿರಸ್ಕರಿಸಿದರೆ ತಕ್ಕ ಬೆಲೆ ತೆರಬೇಕಾಗುತ್ತದೆ. ರಚನಾವದ ಮತ್ತು ವಿಕಾಸವಾದಗಳು ಸಂಪ್ರದಾಯಗಳನ್ನು ಏಕೆ ಪಾಲಿಸಲಾಗುತ್ತದೆ, ಜನರು ನಿರ್ದಿಷ್ಟವಾದ ರೀತಿಯಲ್ಲಿ ಮತ ಚಲಾಯಿಸಲು ಕಾರಣವೇನು ಅಥವಾ ಸ್ವಭಾವಗಳ ಮನೋಭಾವ ಅಥವಾ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಾರೆ, ಅಥವಾ ವಿಭಿನ್ನ ಭಾಷೆಗಳು ಸಾಮಾನ್ಯ ವೈಶಿಷ್ಟ್ಯಗಳನ್ನು ಏಕೆ ಹೊಂದಿವೆ ಎಂದು ತಿಳಿಸುವುದಿಲ್ಲ. ಕಾಲ ಅಥವಾ ವಯಸ್ಸನ್ನು ಬದಲಾಯಿಸಲಾಗುವುದಿಲ್ಲ; ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಕೃತಿ  ವಿಕಸಿಸುವುದನ್ನು ನಾವು  ಕೇವಲ ಕಾದುನೋಡಬೇಕಾಗುತ್ತದೆ.

ವ್ಯಾವಹಾರಿಕವಾಗಿ, ರಚನಾವಾದಿಯು ಒದಗಿಸಿದ ಅಂಕಿ–ಅಂಶಗಳನ್ನು ವ್ಯವಸ್ಥಿತವಾಗಿ ಕಡೆಗಣಿಸಿರುವುದು, ಆ ಉಪಯುಕ್ತವಾದ ಮಾಹಿತಿಯನ್ನು ಬೇರೆಯವರು ತಮ್ಮ ಕಾರ್ಯಕ್ಕೆ ಬಳಸಿಕೊಳ್ಳುವಂತಾಗಿದೆ – ಉದಾಹರಣೆಗೆ, ಯಾವುದಾದರೊಂದು ರೀತಿಯಲ್ಲಿ ವರ್ತನೆಯ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಸಫಲರಾಗುವಂತಹ ಅಧಿಕಾರಿಗಳು. ಆದರೆ ಸಿದ್ಧಾಂತಗಳಲ್ಲಿ ಇವು ಕೇವಲ ಮನೋವಾದೀಯ ಪರಿಕಲ್ಪನೆಗಳಾಗಿ ಉಳಿದಿವೆ. ವಿವರಣೆಗಳನ್ನು ಅಪೇಕ್ಷಿಸಿದಾಗ, ಆದಿಕಾಲದ ಸಂಸ್ಕೃತಿಯ ಆಚರಣೆಗಳನ್ನು "ಅನಾಗರಿಕ ಮನೋವೃತ್ತಿ" ಹೊಂದಿದವರಿಗೆ, ಭಾಷಾರ್ಜನೆಯನ್ನು "ವ್ಯಾಕರಣದ ಆಂತರಿಕ ನಿಯಮ"ಗಳಿಗೆ, ಸಮಸ್ಯಾ ಪರಿಹಾರ ಯುಕ್ತಿಗಳ ವಿಕಾಸವನ್ನು "ಮನಸ್ಸಿನ ಬೆಳವಣಿಗೆ"ಗೆ, ಇತ್ಯಾದಿಯಾಗಿ ಆರೋಪಿಸಲಾಗುತ್ತದೆ. ಸಂಕ್ಷಿಪ್ತದಲ್ಲಿ, ರಚನಾವಾದವು ಜನರು ಹೇಗೆ ವರ್ತಿಸುತ್ತಾರೆ ಎಂದು ಹೇಳುತ್ತದೆ ಆದರೆ ಅವರು ಏಕೆ ಹೀಗೆ  ವರ್ತಿಸುತ್ತಾರೆ ಎಂಬುದರ ಬಗ್ಗೆಹೆಚ್ಚು ಬೆಳಕು ಚೆಲ್ಲುವುದಿಲ್ಲ. ನಮ್ಮ ಪ್ರಾರಂಭಿಕ ಪ್ರಶ್ನೆಗೆ ಇದರ ಬಳಿ ಉತ್ತರವಿಲ್ಲ.

## ವಿಧಾನಶಾಸ್ತ್ರೀಯ ವರ್ತನಾವಾದ

ಮಧ್ಯಸ್ಥ ಭಾವನೆಗಳು ಅಥವಾ ಮನಸ್ಸಿನ ಸ್ಥಿತಿಗಳನ್ನು ಬದಿಗಿಟ್ಟು, ನೇರವಾಗಿ ಭೌತಿಕ ಕಾರಣಗಳಹಿಂದಿನ ಸ್ಥಿತಿಗೆ ಹೋಗುವ ಮೂಲಕ ಮನೋವಾದೀಯ ಸಮಸ್ಯೆಯನ್ನು ತಪ್ಪಿಸಬಹುದು. ಇದನ್ನು ಮಾಡುವ ತ್ವರಿತವಾದ ಹಾದಿಯೆಂದರೆ ಪ್ರಾರಂಭಿಕ ವರ್ತನಾವಾದಿ, ಮ್ಯಾಕ್ಸ್ ಮೆಯೆರ್‌ರವರು ಹೇಳಿರುವ "ಇನ್ನೊಬ್ಬರ ಮನೋವಿಜ್ಞಾನ"ಕ್ಕೆ ನಮ್ಮನ್ನು ಮಿತಿಗೊಳಿಸಿಕೊಳ್ಳುವುದು. ವ್ಯಕ್ತಿಯೊಬ್ಬನ  ವರ್ತನೆಯನ್ನು ಅವನ ಹಿಂದಿನ ಪರಿಸರದ ಇತಿಹಾಸಕ್ಕೆ ಸಂಬಂಧಿಸಿದ ವಸ್ತುನಿಷ್ಠವಾಗಿ ವೀಕ್ಷಿಸಬಹುದಾದ ಅಂಶಗಳನಷ್ಟೇ ಪರಿಗಣಿಸಿರಿ. ಎಲ್ಲಾ ಕೊಂಡಿಗಳು ನಿಯಮಬದ್ಧವಾಗಿದ್ದರೆ, ಒಂದು ಸಂಭಾವ್ಯ ಭೌತಿಕೇತರಕೊಂಡಿಯನ್ನು ಕಡೆಗಣಿಸುವುದರಿಂದ ಏನನ್ನೂ ಕಳೆದುಕೊಳ್ಳುವುದಿಲ್ಲ. ಹಾಗಾಗಿ, ಮಗುವೊಂದು ಬಹಳ ಹೊತ್ತಿನಿಂದ ಏನನ್ನೂ ತಿಂದಿಲ್ಲ ಎಂದು ನಮಗೆ ತಿಳಿದರೆ, ಮತ್ತು ಆದ್ದರಿಂದ ಅದು ಹಸಿವನ್ನು ಅನುಭವಿಸುತ್ತದೆ ಎನ್ನುವುದು ನಮಗೆ ತಿಳಿದರೆ, ಮತ್ತು ಅದಕ್ಕೆ ಹಸಿವಾದ ಕಾರಣದಿಂದಾಗಿ ತದನಂತರ ತಿನ್ನುತ್ತದೆ ಎನ್ನುವುದು ನಮಗೆ ತಿಳಿದರೆ, ನಂತರ ಮಗುವು ಬಹಳ ಹೊತ್ತಿನ ತನಕ ಏನನ್ನೂ ತಿಂದಿರದಿದ್ದರೆ ಅದು ತಿನ್ನುವುದು ಎನ್ನುವುದು ನಮ್ಮ ಅರಿವಿಗೆ ಬರುತ್ತದೆ. ಮತ್ತು, ಬೇರೆ ಆಹಾರವನ್ನು ಕೈಗೆಟುಕದಂತೆ ಮಾಡುವ ಮೂಲಕ ನಾವು ಮಗುವನ್ನು ಹಸಿವಿಗೀಡಾಗುವಂತೆ ಮಾಡಿದರೆ, ಮತ್ತು ಹಸಿವಿನ ಕಾರಣದಿಂದಾಗಿ ಅದು ತದನಂತರ ವಿಶಿಷ್ಟ ಆಹಾರವೊಂದನ್ನು

ತಿಂದರೆ, ನಂತರ ನಾವು ಬೇರೆ ಆಹಾರವನ್ನು ಕೈಗೆಟುಕದಂತೆ ಮಾಡಿದ ಕಾರಣದಿಂದಾಗಿ ಮಗು ವಿಶಿಷ್ಟ ಆಹಾರವನ್ನು ತಿನ್ನುವಂತೆ ಪ್ರೇರೇಪಿಸಿದೆವು ಎಂದು ಖಚಿತವಾಗಿ ಭಾವಿಸಬಹುದು.

ಇದೇ ರೀತಿಯಲ್ಲಿ, ವ್ಯಕ್ತಿಯೊಬ್ಬನಿಗೆ ನಿರ್ದಿಷ್ಟ ರೀತಿಗಳಲ್ಲಿ ಹೇಳಿಕೊಡುವುದು ಆತ ತನ್ನ "ಸಂವೇದನೆ" ಗಳಲ್ಲಿನ ಅತಿ ಸೂಕ್ಷ್ಮ ವ್ಯತ್ಯಯಗಳನ್ನು ಗಮನಿಸುವಂತೆ ಮಾಡಿದರೆ, ಮತ್ತು ಈ ವ್ಯತ್ಯಯಗಳನ್ನು ಕಾಣಲು ಸಾಧ್ಯವಾದ ಕಾರಣದಿಂದಾಗಿ ಆತ ಬಣ್ಣದ ವಸ್ತುಗಳನ್ನು ಸರಿಯಾಗಿ ವಿಂಗಡಿಸಬಲ್ಲನಾದರೆ, ನಂತರ ವಸ್ತುಗಳನ್ನು ಸರಿಯಾಗಿ ವಿಂಗಡಿಸಲು ನಾವು ಆತನಿಗೆ ಈ ರೀತಿಯ ಕಲಿಸುವಿಕೆಯನ್ನು ಉಪಯೋಗಿಸಬಹುದು ಎಂಬ ಅಭಿಪ್ರಾಯಕ್ಕೆ ಬರಬಹುದು. ಅಥವಾ, ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಬಿಳಿಯರ ಇತಿಹಾಸದಲ್ಲಿ ಕರಿಯರ ಬಗ್ಗೆ ಆಕ್ರಮಣಕಾರಿ ಭಾವನೆಗಳನ್ನು ಉಂಟುಮಾಡುವ ಸಂದರ್ಭಗಳಿದ್ದರೆ, ಮತ್ತು ಈ ಭಾವನೆಗಳು ಆತನನ್ನು ಆಕ್ರಮಣಕಾರಿಯಾಗಿ ವರ್ತಿಸುವಂತೆ ಮಾಡಿದ್ದರೆ ಆಗ ನಾವು ಆತನ ಆಕ್ರಮಣಕಾರಿ ವರ್ತನೆ ಮತ್ತು ಆತನ ಇತಿಹಾಸದಲ್ಲಿನ ಸನ್ನಿವೇಶಗಳ ನಡುವಿನ ಸಂಬಂಧವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬಹುದು.

ಹಿಂದಿನ ಸಾರ್ವಜನಿಕ ಘಟನೆಗಳನ್ನು ಅವಲೋಕಿಸುವ ಅಥವಾ ಬದಲಿಸುವ ಮೂಲಕ ವರ್ತನೆಯನ್ನು ಊಹಿಸಲು ಅಥವಾ ನಿಯಂತ್ರಿಸಲು ಪ್ರಯತ್ನಿಸುವುದರಲ್ಲಿ ಹೊಸತೇನೂ ಇಲ್ಲ. ರಚನಾವಾದಿಗಳು ಮತ್ತು ವಿಕಾಸನವಾದಿಗಳು ತಮ್ಮ ವಿಷಯಗಳ ಇತಿಹಾಸವನ್ನು ಸಂಪೂರ್ಣವಾಗಿ ಕಡೆಗಣಿಸಿಲ್ಲ,ಮತ್ತು ಇತಿಹಾಸಕಾರರು ಹಾಗೂ ಜೀವನಚರಿತ್ರಕಾರರು ವಾತಾವರಣ, ಸಂಸ್ಕೃತಿ, ವ್ಯಕ್ತಿಗಳು, ಮತ್ತು ಘಟನೆಗಳ ಪ್ರಭಾವವನ್ನು ಅನ್ವೇಷಿಸಿದ್ದಾರೆ. ಮನಸ್ಸಿನ ಸ್ಥಿತಿಯ ಬಗ್ಗೆ ಹೆಚ್ಚು ಗಮನ ಕೊಡದೆ ವರ್ತನೆಯನ್ನು ಊಹಿಸುವ ಮತ್ತು ನಿಯಂತ್ರಿಸುವ ಪ್ರಾಯೋಗಿಕ ತಂತ್ರಗಳನ್ನು ಜನರು ಬಳಸಿದ್ದಾರೆ. ಮಾನವನ ತಿಳುವಳಿಕೆ ಮತ್ತು ಮನಸ್ಸಿನ ಜೀವನದ ಬಗ್ಗೆ ನೂರಾರು ಅತೀ ತಾಂತ್ರಿಕ ಸಂಪುಟಗಳನ್ನು ಬರೆಯಲಾಗಿದೆ. ಆದಾಗ್ಯೂ, ಹಲವಾರು ಶತಮಾನಗಳವರೆಗೂ ಭೌತಿಕ ಪರಿಸರದ ಪಾತ್ರದ ಕುರಿತು ಹೆಚ್ಚು ವ್ಯವಸ್ಥಿತ ವಿಚಾರಣೆಗಳಿರಲಿಲ್ಲ. ವರ್ತನೆಯ ವೈಜ್ಞಾನಿಕ ಅವಲೋಕನದಲ್ಲಿ ಪ್ರಗತಿಯನ್ನು ಸಾಧಿಸಲು ಆರಂಭವಾದಾಗ ಮಾತ್ರ ವಿಧಾನಶಾಸ್ತ್ರೀಯ ವರ್ತನವಾದದ ಯೋಜನೆಯು ಸಮಂಜಸವೆಂದು ಪರಿಗಣಿಸಲ್ಪಟ್ಟಿತು. ಏಕೆಂದರೆ, ಆಗ ಮಾತ್ರ ಪರಿಸರದ ಪಾತ್ರದಿಂದ ತನಿಖೆಯ ದಿಕ್ಕನ್ನು ದೂರಕ್ಕೆ ಕೊಂಡೊಯ್ಯುವ ಮನೋವಾದದ ಶಕ್ತಿಶಾಲಿ ಪರಿಣಾಮವನ್ನು ಅತಿಕ್ರಮಿಸಲು ಸಾಧ್ಯವಾಯಿತು.

ಮನೋವಾದೀಯ ವಿವರಣೆಗಳು ಕುತೂಹಲವನ್ನು ತಗ್ಗಿಸಿ ವಿಚಾರಣೆಯನ್ನು ತಡೆಯುತ್ತದೆ. ಒಂದು ಸ್ಥಳ ಮತ್ತು ಕಾಲಮಾನದಲ್ಲಿ ಭಾವನೆಗಳು ಮತ್ತು ಮನಸ್ಸಿನ ಸ್ಥಿತಿಗಳನ್ನು ಅವಲೋಕಿಸುವುದು ಬಹಳ ಸುಲಭವಾಗಿದ್ದು, ಅವುಗಳು ನಾವು ಮತ್ತಷ್ಟು ವಿಚಾರಣೆ ನಡೆಸಲು ಬಯಸದಂತಹ ಕಾರಣಗಳಂತೆ ಭಾಸವಾಗುತ್ತವೆ. ಒಂದು ಬಾರಿ ಪರಿಸರವನ್ನು ಅಭ್ಯಸಿಸಲು ಪ್ರಾರಂಭಿಸಿದರೆ ಅದರ ಮಹತ್ವವನ್ನು ಕಡೆಗಣಿಸಲಾಗುವುದಿಲ್ಲ.

ವಿಧಾನಶಾಸ್ತ್ರೀಯ ವರ್ತನವಾದವನ್ನು ತಾರ್ಕಿಕ ಸಕಾರಾತ್ಮಕತೆ ಅಥವಾ ಕಾರ್ಯಕಾರಿತ್ವವಾದದ ಮನೋವೈಜ್ಞಾನಿಕ ರೂಪಾಂತರ ಎಂದು ಭಾವಿಸಬಹುದು. ಆದರೆ, ಅವುಗಳು ಬೇರೆಯದೇ ವಿಷಯಗಳ ಬಗ್ಗೆ ಕಾಳಜಿ ವಹಿಸುರುತ್ತವೆ. ತಾರ್ಕಿಕ ಸಕಾರಾತ್ಮಕತೆ ಅಥವಾ ಕಾರ್ಯಕಾರಿತ್ವವಾದದ ಅಭಿಪ್ರಾಯದಂತೆ ಮನಸ್ಸಿನ ಪ್ರಪಂಚದಲ್ಲಿ ಏನಾಗುತ್ತದೆ ಎನ್ನುವುದರ ಬಗ್ಗೆ ಇಬ್ಬರು ಅವಲೋಕನಕಾರರು ಒಮ್ಮತಕ್ಕೆ ಬರಲು ಸಾಧ್ಯವಿಲ್ಲ. ಆಗ ಭೌತವಿಜ್ಞಾನದ ದೃಷ್ಟಿಕೋನದಿಂದ ಮಾನಸಿಕ ಘಟನೆಗಳು "ಅವಲೋಕನಾತೀತ"; ಸತ್ಯವು ಒಮ್ಮತದ್ದಾಗಿರುವುದು ಸಾಧ್ಯವಿಲ್ಲ, ಮತ್ತು ನಾವು ಮನಸ್ಸಿನ ಘಟನೆಗಳನ್ನು ಪರೀಕ್ಷಿಸುವುದನ್ನು ತೊರೆದು ಅದರ ಬದಲು ಅವುಗಳನ್ನು ಹೇಗೆ ಅಧ್ಯಯನ ಮಾಡಲಾಗುತ್ತದೆ ಎಂಬುದಕ್ಕೆ ಗಮನಹರಿಸಬೇಕು. ಸಂವೇದನೆ ಮತ್ತು ಗ್ರಹಿಕೆಗಳನ್ನು ನಾವು ಮೂಲರೂಪದಲ್ಲಿ ಮಾಪನ ಮಾಡಲಾಗುವುದಿಲ್ಲ. ಆದರೆ, ಪ್ರಚೋದಸೆಗಳನ್ನು ವಿವೇಚಿಸಬಲ್ಲ ವ್ಯಕ್ತಿಯ ಸಾಮರ್ಥ್ಯವನ್ನು ನಾವು ಮಾಪನ ಮಾಡಬಹುದು, ಮತ್ತು ಸಂವೇದನೆ ಅಥವಾ ಗ್ರಹಿಕೆಯ ಪರಿಕಲ್ಪನೆಯನ್ನು ವಿವೇಚನಾ ಕಾರ್ಯಾಚರಣೆಗೆ ಸೀಮಿತಗೊಳಿಸಬಹುದು.

ತಾರ್ಕಿಕ ಸಕಾರಾತ್ಮಕ ವಾದಿಗಳಿಗೆ "ಮತ್ತೊಂದರ" ಬಗ್ಗೆ ತಮ್ಮದೇ ಆದ ವ್ಯಾಖ್ಯಾನವಿತ್ತು. ಅವರ ತರ್ಕದಂತೆ ನಿಖರವಾಗಿ ಮಾನವನಂತೆಯೇ ವರ್ತಿಸುವ ಒಂದು ಯಂತ್ರಮಾನವ, ಪ್ರಚೋದನೆಗೆ ಅದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡುವ, ಅದೇ ರೀತಿಯ ಕಾರ್ಯಾಚರಣೆಗಳಿಂದಾಗಿ ತನ್ನ ವರ್ತನೆಯನ್ನು ಬದಲಾಯಿಸುವ, ನೈಜ ವ್ಯಕ್ತಿಯಿಂದ ಪ್ರತ್ಯೇಕಿಸಲಾಗದ ಆದರೆ ಭಾವನೆಗಳು, ಸಂವೇದನೆಗಳು ಅಥವಾ ವಿಚಾರಗಳನ್ನು ಹೊಂದಿಲ್ಲದ ಯಂತ್ರಮಾನವರನ್ನು

ನಿರ್ಮಿಸುವಂತಾದಲ್ಲಿ, ಮಾನಸಿಕ ಜೀವನವನ್ನು ಅಭಿವ್ಯಕ್ತ ಪಡಿಸುವ ಯಾವುದೇ ಗುಣಗಳು ಮನೋವಾದೀಯ ವಿವರಣೆಯನ್ನು ಅಪೇಕ್ಷಿಸುವುದಿಲ್ಲವೆಂದು ಸಾಬೀತಾಗುತ್ತದೆ.

ವಿಧಾನವಾದದ ವರ್ತನಾವಾದವು ತನ್ನದೇ ಆದ ಗುರಿಗಳಿಗೆ ಸಂಬಂಧಿಸಿದಂತೆ ಯಶಸ್ವಿಯಾಗಿತ್ತು. ಮನೋವಾದವು ಒಡ್ಡಿದ ಬಹಳಷ್ಟು ಸಮಸ್ಯೆಗಳನ್ನು ಇದು ಹೊರಹಾಕಿತು ಮತ್ತು ತತ್ವಶಾಸ್ತ್ರದ ವಿಷಯಾಂತರವಿಲ್ಲದೆ ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸಲು ತನ್ನನ್ನು ಬಿಡುಗಡೆಗೊಳಿಸಿಕೊಂಡಿತು. ಅನುವಂಶಿಕ ಮತ್ತು ಪರಿಸರಾತ್ಮಕ ಪೂರ್ವವರ್ತಿಗಳ ಮೇಲೆ ಗಮನವನ್ನು ನಿರ್ದೇಶಿಸಿದ ಕಾರಣದಿಂದಾಗಿ, ಅದು ಅಂತರಿಕ ಜೀವನದ ಮೇಲಿನ ಅನಪೇಕ್ಷಿತ ಏಕಾಗ್ರತೆಯನ್ನು ಸರಿದೂಗಿಸಿತು. ಅಂತರಾವಲೋಕನ (ಆಗ ಮಾನವನಿಗೆ ಸೀಮಿತ ಎಂದು ಭಾವಿಸಲಾಗಿದ್ದ) ಸಾಧ್ಯವಿಲ್ಲದ ಕೆಳವರ್ಗದ ಜೀವಿಗಳ ವರ್ತನೆಗಳನ್ನು ಅಭ್ಯಸಿಸಲು ಮತ್ತು ಮಾನವ ಹಾಗೂ ಇತರ ವರ್ಗದ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸವನ್ನು ಅನ್ವೇಷಿಸಲು ಇದು ನಮ್ಮನ್ನು ಸ್ವಾತಂತ್ರಗೊಳಿಸಿತು. ಖಾಸಗೀ ಘಟನೆಗಳಿಗೆ ಸಂಬಂಧಿಸಿದಂತಹ ಸಾಹಚರ್ಯವನ್ನು ಹೊಂದಿದ್ದ ಕೆಲವು ಪರಿಕಲ್ಪನೆಗಳನ್ನು ಇತರ ವಿಧಗಳಲ್ಲಿ ರೂಪಿಸಲಾಯಿತು.

ಆದರೆ ಸಮಸ್ಯೆಗಳು ಉಳಿದುಕೊಂಡವು. ಹೆಚ್ಚಿನ ವಿಧಾನಶಾಸ್ತ್ರೀಯ ವರ್ತನಾವಾದಿಗಳು ಮಾನಸಿಕ ಘಟನೆಗಳಿಗೆ ಅಸ್ತಿತ್ವವಿದೆ ಎಂದು ಒಪ್ಪಿಕೊಂಡರೂ ಸಹ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಮೂರು ಹಂತದ ಅನುಕ್ರಮಗಳಾದ ಶಾರೀರಿಕ–ಮಾನಸಿಕ–ಶಾರೀರಿಕಗಳಲ್ಲಿ, ಮಧ್ಯದ ಹಂತವಾದ ಮಾನಸಿಕ ಹಂತವು ಏನನ್ನೂ ಕೊಡುಗೆಯಾಗಿ ನೀಡಿಲ್ಲ ಎಂದು ಅವರು ನಿಜವಾಗಿಯೂ ಹೇಳುತ್ತಿದ್ದರೆ? ಅಂದರೆ, ಭಾವನೆಗಳು ಮತ್ತು ಮನಸ್ಸಿನ ಸ್ಥಿತಿಯು ಕೇವಲ ಎಪಿಫಿನೋಮೆನಾ ವೇ (epiphenomena – ಉಪಲಕ್ಷಣ)? ಹೀಗೆ ಹೇಳಿರುವುದು ಇದೇ ಮೊದಲಲ್ಲ. ಶಾರೀರಿಕ ಪ್ರಪಂಚವೊಂದೇ ಸ್ವಯಂಪೂರ್ಣವಾಗಬಲ್ಲದು ಎಂಬ ದೃಷ್ಟಿಕೋನವನ್ನು ಹಾಗೂ ಮನಸ್ಸು ಮತ್ತು ಭೌತವಸ್ತುಗಳೆಂಬ ಎರಡು ಜಗತ್ತುಗಳಿದ್ದು ಒಂದು ಮತ್ತೊಂದರ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ ಎಂದು ಶತಮಾನಗಳ ಹಿಂದೆಯೇ ಮನೋಭೌತಿಕ ಸಾದೃಶ್ಯಗಳ ಸಿದ್ಧಾಂತದಲ್ಲಿ ಸೂಚಿಸಲಾಗಿದೆ. ಫ್ರಾಯ್ಡ್‌ರವರು ಪ್ರಮಾಣೀಕರಿಸಿದ ಭಾವನೆಗಳು ಅಥವಾ ಮನಸ್ಸಿನ ಸ್ಥಿತಿಗಳ ಅರಿವು ಅನಾವಶ್ಯಕವಾದದ್ದು ಎಂದಂತಹ ಸುಪ್ತ ಪ್ರಜ್ಞೆ ಅದೇ ದಿಕ್ಕನ್ನು ತೋರಿಸಿತು.

ಆದರೆ, ಇತರ ಸಾಕ್ಷಿಗಳ ಬಗ್ಗೆ ಏನು? ಸಾಂಪ್ರದಾಯಿಕ ಪೋಸ್ಟ್ ಹಾಕ್, ಎರ್ಗೋ ಪ್ರೊಪ್ಟರ್ ಹಾಕ್ (ಠಿಥಿಣ ಿಠಿಛಿ, ಜಡಿರಠ ಠಿಡಿಠಠಿಣಜಡಿ ಿಠಿಛಿ) ವಾದಗಳು ಸಂಪೂರ್ಣವಾಗಿ ದೋಷಪೂರಿತವಾದುದೇ? ನಾವು ವರ್ತಿಸುವ ಕ್ಷಣ ಮುನ್ನ ಅನುಭವಿಸುವ ಭಾವನೆಗಳು ಸಂಪೂರ್ಣವಾಗಿ ನಮ್ಮವರ್ತನೆಗೆ ಸಂಬಂಧ ಹೊಂದಿಲ್ಲವೇ? ಮನೋದೈಹಿಕ ವೈದ್ಯಶಾಸ್ತ್ರಗಳಲ್ಲಿ ಉಲ್ಲೇಖಿಸಿರುವ ಭೌತವಸ್ತುವಿನ ಮೇಲೆ ಮನಸ್ಸಿನ ಶಕ್ತಿಯ ಪಾತ್ರವೇನು? ಮನೋಭೌತಶಾಸ್ತ್ರ ಹಾಗೂ ಪ್ರಚೋದಕಗಳು ಮತ್ತು ಸಂವೇದನೆಯ ಪರಿಮಾಣಗಳ ನಡುವಿನ ಗಣತೀಯ ಸಂಬಂಧವನ್ನು ಹೇಗೆ ಅರ್ಥೈಸಿಸಬೇಕು? ಜಾಗೃತ ಪ್ರಜ್ಞೆಯ ಹರಿವು ಏನು? ಇತರ ಭಾವನೆಗಳನ್ನು, ಇತರ ಸ್ಮೃತಿಗಳನ್ನು ಪ್ರಚೋದಿಸುವ ಅಥವಾ ಮರೆಮಾಚುವ ಸ್ಮೃತಿಗಳ ಅತೀಂದ್ರಿಯ ಪ್ರಕ್ರಿಯೆಗಳಿಗೆ ಸಂಬಂಧಪಟ್ಟ ಮನೋವೈದ್ಯ ಶಾಸ್ತ್ರವನ್ನು ಹೇಗೆ ಅರ್ಥೈಸಿಸಬೇಕು? ಗ್ರಹಿಕೆ, ಪ್ರತ್ಯಕ್ಷಾನುಭವ, ಆಲೋಚನೆ, ವಾಕ್ಯಗಳ ರಚನೆ, ಮತ್ತು ಕಲಾತ್ಮಕ ಸೃಷ್ಠಿಯನ್ನು ವಿವರಿಸುವ ಬೌದ್ಧಿಕ ಪ್ರಕ್ರಿಯೆಗಳನ್ನು ಹೇಗೆ ಅರ್ಥೈಸಿಸಬೇಕು? ವಸ್ತುನಿಷ್ಠವಾಗಿ ಅಧ್ಯಯನ ಮಾಡಲು ಸಾಧ್ಯವಿಲ್ಲವೆಂದು ಇವೆಲ್ಲವುಗಳನ್ನು ಕಡೆಗಣಿಸಬೇಕೆ?

## ತೀವ್ರವಾದಿ ವರ್ತನಾವಾದ

ಭಾವನೆಗಳ, ಸಂವೇದನೆಗಳ, ಕಲ್ಪನೆಗಳ ಮತ್ತು ಇನ್ನಿತರ ಮಾನಸಿಕ ಜೀವನದ ಅಸ್ತಿತ್ವವನ್ನು ವರ್ತನಾವಾದಿಗಳು ನಿರಾಕರಿಸುತ್ತಾರೆ ಎಂಬ ಹೇಳಿಕೆಗೆ ಬಹಳಷ್ಟು ಸ್ಪಷ್ಟತೆಯ ಅಗತ್ಯವಿದೆ. ವೈಯಕ್ತಿಕ ಘಟನೆಗಳ ಸಿಂಧುತ್ವದ ಬಗ್ಗೆ ಸಾರ್ವಜನಿಕ ಒಮ್ಮತವಿರಲು ಸಾಧ್ಯವಿಲ್ಲದ ಕಾರಣ ಅದನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ವಿಧಾನಶಾಸ್ತ್ರೀಯ ವರ್ತನಾವಾದ ಮತ್ತು ತಾರ್ಕಿಕ ಸಕಾರಾತ್ಮಕತೆಯ ಕೆಲವು ಆವೃತ್ತಿಗಳು ಸೂಚಿಸಿದವು. ಅಂತರಾವಲೋಕನವನ್ನು ವೈಜ್ಞಾನಿಕ ಅಭ್ಯಾಸವಾಗಿ ಒಪ್ಪಿಕೊಳ್ಳಲಾಗಲಿಲ್ಲ, ಹಾಗೂ ವಿಲ್ಹೆಲ್ಮ್ ವಾಂಟ್ ಮತ್ತು ಎಡ್ವರ್ಡ್ ಬಿ. ಟಿಚನರ್ ರಂತಹ ಮನೋವಿಜ್ಞಾನಿಗಳು ಟೀಕೆಗೆ ಒಳಪಟ್ಟರು. ಆದಾಗ್ಯೂ, ತೀವ್ರವಾದಿ ವರ್ತನಾವಾದವು ಬೇರೆಯದೇ ಮಾರ್ಗವನ್ನು

ಅನುಸರಿಸುತ್ತದೆ. ಆತ್ಮವೀಕ್ಷಣೆ ಅಥವಾ ಆತ್ಮಜ್ಞಾನ ಅಥವಾ ಅವುಗಳ ಸಂಭಾವ್ಯ ಉಪಯುಕ್ತತೆಗಳ ಸಾಧ್ಯತೆಗಳನ್ನು ಅದು ಅಲ್ಲಗಳೆಯುವುದಿಲ್ಲ, ಆದರೆ ಅದು ಭಾವಿಸಲ್ಪಟ್ಟ ಅಥವಾ ವೀಕ್ಷಣೆಯಿಂದ ತಿಳಿಯಲ್ಪಟ್ಟಿದ್ದನ್ನು ಪ್ರಶ್ನಿಸಿಸುತ್ತದೆ. ಹಾಗಾಗಿ ಇದು ಆತ್ಮಾವಲೋಕನವನ್ನು ಮತ್ತೊಮ್ಮೆ ಗಣನೆಗೆ ತೆಗೆದುಕೊಂಡಿತು. ಆದರೆ, ತತ್ವಶಾಸ್ತ್ರಜ್ಞರು ಮತ್ತು ಆತ್ಮಾವಲೋಕನ ಮನೋವಿಜ್ಞಾನಿಗಳು ನಂಬಿದಂತಹ ವೀಕ್ಷಣೆಯಲ್ಲ ಮತ್ತು ಇದು ವ್ಯಕ್ತಿಯೊಬ್ಬನು ತನ್ನ ಶರೀರವನ್ನು ವೀಕ್ಷಿಸಲು ಎಷ್ಟರ ಮಟ್ಟಿಗೆ ಸಾಧ್ಯ ಎಂಬ ಪ್ರಶ್ನೆಯನ್ನು ಮೂಡಿಸುತ್ತದೆ.

ಮನೋವಾದವು, ಪರ್ಯಾಯ ವಿವರಣೆಯೊಂದನ್ನು ನೀಡುವ ಮುಖಾಂತರ, ಗಮನವನ್ನು ವರ್ತನೆಯನ್ನು ವಿವರಿಸಬಹುದಾದ ಬಾಹ್ಯ ಪೂರ್ವೇತಿಹಾಸ ಘಟನೆಗಳಿಂದ ದೂರವಿಟ್ಟಿತು. ವಿಧಾನಶಾಸ್ತ್ರೀಯ ವರ್ತನಾವಾದವು ಇದಕ್ಕೆ ತದ್ವಿರುದ್ಧವಾಗಿರುವುದನ್ನು ಮಾಡಿತು: ಬಾಹ್ಯ ಘಟನೆಗಳ ಪೂರ್ವೇತಿಹಾಸವನ್ನು ಪ್ರತ್ಯೇಕವಾಗಿ ವ್ಯವಹರಿಸುವ ಮೂಲಕ ಅವಧಾನವನ್ನು ಆತ್ಮವೀಕ್ಷಣೆ ಮತ್ತು ಆತ್ಮಜ್ಞಾನದಿಂದ ದೂರವಿಟ್ಟಿತು. ತೀರ್ವವಾದಿ ವರ್ತನಾವಾದವು ಒಂದು ರೀತಿಯ ಸಮತೋಲನವನ್ನು ಪುನರ್ ಸ್ಥಾಪಿಸುತ್ತದೆ. ಅದು ಸತ್ಯವು ಏಕಾಭಿಪ್ರಾಯದಿಂದ ಕೂಡಿರಬೇಕೆಂದು ಒತ್ತಾಯಿಸುವುದಿಲ್ಲ. ಆದ್ದರಿಂದ ವೈಯಕ್ತಿಕ ಒಳ ಪ್ರಪಂಚದೊಳಗೆ ಸಂಭವಿಸುವ ಘಟನೆಗಳನ್ನು ಪರಿಗಣಿಸುತ್ತದೆ. ಈ ಘಟನೆಗಳನ್ನು ಅವಲೋಕಿಸಲಾಗದ್ದು ಎಂದು ಕರೆಯುವುದಿಲ್ಲ ಮತ್ತು ಅವುಗಳನ್ನು ವ್ಯಕ್ತಿಗತವೆಂದು ಕಡೆಗಣಿಸುವುದಿಲ್ಲ. ಅವಲೋಕಿಸಿದ ವಸ್ತುವಿನ ಸ್ವರೂಪ ಮತ್ತು ಅವಲೋಕನದ ವಿಶ್ವಸನೀಯತೆಯನ್ನು ಮಾತ್ರ ಅದು ಪ್ರಶ್ನಿಸುತ್ತದೆ.

ಅದರ ನಿಲುವನ್ನು ಈ ಕೆಳಕಂಡಂತೆ ಹೇಳಬಹುದು: ಭಾವಿಸಲಾಗಿರುವ ಅಥವಾ ಆತ್ಮಾವಲೋಕನೀಯವಾಗಿ ಅವಲೋಕಿಸಿರುವುದು ಭೌತಿಕವಲ್ಲದ ಪ್ರಪಂಚಕ್ಕೆ ಸೇರಿದ ಪ್ರಜ್ಞೆ, ಮನಸ್ಸು, ಅಥವಾ ಮಾನಸಿಕ ಜೀವನವಾಗಿರದೆ ಸ್ವತಃ ಅವಲೋಕನಕಾರನ ಶರೀರವಾಗಿದೆ. ನಾನು ಮುಂದೆ ತಿಳಿಸುವಂತೆ ಆತ್ಮಾವಲೋಕನವು ಶಾರೀರಿಕ ಸಂಶೋಧನೆಯಲ್ಲ ಅಥವಾ ಏನು ಅನಿಸಿದೆಯೋ ಅಥವಾ ಆತ್ಮಾವಲೋಕನೀಯವಾಗಿ ಅವಲೋಕಿಸಿರುವುದೋ ಅವುಗಳು ವರ್ತನೆಯ ಕಾರಣಗಳು ಎಂಬುದಲ್ಲ (ಇದು ವಾದದ ತಿರುಳಾಗಿದೆ). ಒಂದು ಜೀವಿಯ ವರ್ತನೆಗೆ ಅದರ ಪ್ರಸ್ತುತ ರಚನೆ ಕಾರಣವಾಗಿರುತ್ತದೆ, ಆದರೆ ಇವುಗಳಲ್ಲಿ ಹೆಚ್ಚಿನವು ಆತ್ಮಾವಲೋಕನಕ್ಕೆ ಹೊರತಾಗಿರುತ್ತದೆ. ಸದ್ಯಕ್ಕೆ, ವಿಧಾನಶಾಸ್ತ್ರೀಯ ವರ್ತನಾವಾದಿಗಳು ಒತ್ತಿ ಹೇಳಿರುವಂತೆ, ವ್ಯಕ್ತಿಯ ಅನುವಂಶೀಯ ಮತ್ತು ಪರಿಸರದ ಇತಿಹಾಸಗಳೊಂದಿಗೆ ನಾವು ತೃಪ್ತಿಗೊಳ್ಳಬೇಕು. ಆತ್ಮಾವಲೋಕನೀಯವಾಗಿ ಅವಲೋಕಿಸಿರುವುದು ಈ ಇತಿಹಾಸಗಳ ಕೆಲವು ಪರೋಕ್ಷ ಫಲಿತಗಳು.

ಜೀವಿಯ ಉಗಮದ ಸಂದರ್ಭದಲ್ಲಿ ಪರಿಸರವು ತನ್ನ ಮೊದಲ ಶ್ರೇಷ್ಠ ಕೊಡುಗೆಯನ್ನು ನೀಡಿತು ಆದರೆ ಅದು ವ್ಯಕ್ತಿಯ ಜೀವಮಾನದಲ್ಲಿ ಬೇರೆ ರೀತಿಯ ಪರಿಣಾಮವನ್ನು ಬೀರುತ್ತದೆ ಮತ್ತು ಇವೆರಡರ ಪರಿಣಾಮಗಳ ಸಂಯೋಜನೆಯೇ ಯಾವುದೇ ಒಂದು ಸಮಯದಲ್ಲಿ, ನಾವು ಅವಲೋಕಿಸುವ ವರ್ತನೆಯಾಗಿದೆ. ಇವೆರಡರಲ್ಲಿ ಯಾವುದೇ ಒಂದರ ಕೊಡುಗೆಯ ಬಗ್ಗೆ ಲಭ್ಯ ಮಾಹಿತಿಯು ಮಾನವ ವರ್ತನೆಯನ್ನು ಊಹಿಸಲು ಮತ್ತು ನಿಯಂತ್ರಿಸಲು ಹಾಗೂ ದೈನಂದಿನ ಜೀವನವನ್ನು ಅರ್ಥೈಸಿಕೊಳ್ಳಲು ಎಷ್ಟರ ಮಟ್ಟಿಗೆ ಸಹಾಯಕರವಾಗಿರುತ್ತದೆ ಎಂದರೆ ಯಾವುದೇ ಒಂದು ಕೊಡುಗೆಯನ್ನು ಬದಲಾಯಿಸಬಹುದಾದ್ದಲ್ಲಿ, ವರ್ತನೆಯನ್ನೂ ಬದಲಾಯಿಸಬಹುದು.

ನಮ್ಮ ಆಂತರಿಕ ಪ್ರಪಂಚ ಮತ್ತು ಆತ್ಮಜ್ಞಾನದ ಸ್ವರೂಪದ ಮೇಲೆ ಪ್ರಪಂಚದ ಪರಿವಣಾಮವನ್ನು ಪರೀಕ್ಷಿಸಲು ಪರಿಸರದ ನಿಯಂತ್ರಣದ ಬಗ್ಗೆ ನಮಗಿರುವ ಹೆಚ್ಚಿನ ಜ್ಞಾನವು ಸಾಧ್ಯವಾಗಿಸುವುದಲ್ಲದೆ ಮನೋವಾದೀಯದ ವೈವಿಧ್ಯಮಯವಾದ ಅಭಿವ್ಯಕ್ತಿಗಳನ್ನು ವ್ಯಾಖ್ಯಾನಿಸಲೂ ಸಹ ಸಾಧ್ಯವಾಗಿಸುತ್ತದೆ. ಉದಾಹರಣೆಗೆ, ಮನುಷ್ಯರು ಸಂಕಲ್ಪ ಕ್ರಿಯೆ, ಉದ್ದೇಶ, ನೈಜಿಕತೆಯಿಂದ ಪ್ರತ್ಯೇಕವಾಗಿರುವ ಅನುಭವಗಳು, ಜನ್ಮಜಾತ ಅಥವಾ ಅರ್ಜಿತ ವಿಚಾರಗಳು, ನೆನಪುಗಳು, ಅರ್ಥಗಳು, ವಿಜ್ಞಾನಿಗಳ ವ್ಯಕ್ತಿಗತ ಜ್ಞಾನ, ಹಾಗೂ ಇತರೇ ಮನೋವಾದೀಯ ವಸ್ತುಗಳು ಅಥವಾ ಘಟನೆಗಳು – ಇವೆಲ್ಲದರ ಬಗ್ಗೆ ಜನರು ಮಾತನಾಡಲು ಅನುವು ಮಾಡಿಕೊಟ್ಟ ವರ್ತನೆಯ ಗುಣಲಕ್ಷಣಗಳನ್ನು ನಾವು ಗಮನಿಸಬಹುದು. ಇವುಗಳಲ್ಲಿ ಕೆಲವನ್ನು "ವರ್ತನೆಯಾಗಿ ಪರಿವರ್ತಿಸಬಹುದು", ಉಳಿದವುಗಳನ್ನು ಅನಗತ್ಯ ಅಥವಾ ಅರ್ಥಹೀನವೆಂದು ತಿರಸ್ಕರಿಸಬಹುದು.

ಮನೋವಾದದಿಂದ ಉಂಟಾದ ಹಾನಿಯನ್ನು ನಾವು ಈ ರೀತಿಯಲ್ಲಿ ಸರಿಪಡಿಸುತ್ತೇವೆ. ಒಬ್ಬ ವ್ಯಕ್ತಿಯು ಏನನ್ನು ಮಾಡುತ್ತಾನೋ ಅದನ್ನು ಅವನ ಆಂತರ್ಯದಲ್ಲಿನ ಗುಣಧರ್ಮಕ್ಕೆ ಸಂಬಂಧಿಸಿದಾಗ ಅನ್ವೇಷಣೆಯು ಕೊನೆಗೊಳ್ಳುತ್ತದೆ. ವಿವರಣೆಯನ್ನು ಏಕೆ ವಿವರಿಸಬೇಕು? ಎರಡು ಸಾವಿರದ ಐನೂರು ವರ್ಷಗಳಿಂದಲೂ ಜನರು ಭಾವನೆಗಳು ಮತ್ತು

ಮಾನಸಿಕ ಜೀವನದ ಬಗ್ಗೆ ಪರಿಶೋಧನೆ ಮಾಡುವುದರಲ್ಲಿ ಮಗ್ನರಾಗಿದ್ದು ಇತ್ತೀಚೆಗೆ ಮಾತ್ರ ಪರಿಸರದ ಪಾತ್ರದ ನಿಖರ ವಿಶ್ಲೇಷಣೆಯ ಕುರಿತು ಆಸಕ್ತಿ ತೋರಲಾಗುತ್ತಿದೆ. ಆ ಪಾತ್ರದ ಅಜ್ಞಾನವು ಮೊಟ್ಟಮೊದಲಿಗೆ ಮಾನಸಿಕ ಕಲ್ಪನೆಗಳಿಗೆ ದಾರಿಮಾಡಿ ಕೊಟ್ಟಿತು, ಮತ್ತು ಅವುಗಳಿಂದ ಉದ್ಭವಿಸಿದ ವಿವರಣಾತ್ಮಕ ಆಚರಣೆಗಳಿಂದ ಶಾಶ್ವತಗೊಂಡವು.

## ಎಚ್ಚರಿಕೆಯ ಕೆಲವು ಮಾತುಗಳು

ಪೀಠಿಕೆಯಲ್ಲಿ ನಾನು ಹೇಳಿರುವಂತೆ, ನಾನು ವರ್ತನಾವಾದಿಯಂತೆ ಮಾತನಾಡುತ್ತಿಲ್ಲ. ಸಮಂಜಸ, ಸುಸಂಗತ ವಿವರಣೆಯನ್ನು ಬರೆದಿದ್ದೇನೆಂದು ನಾನು ನಂಬುತ್ತೇನೆ. ಆದರೆ ಅದು ನನ್ನದೇ ಪರಿಸರಾತ್ಮಕ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ. ಬಟ್ರಂಡ್ ರಸೆಲ್‌ರವರು ಒಮ್ಮೆ ಸೂಚಿಸದಂತೆ ಅಮೇರಿಕದ ವರ್ತನಾವಾದಿಗಳು ಅಧ್ಯಯನ ನಡೆಸಿದ ಪ್ರಯೋಗಪಶುಗಳು ಅಮೇರಿಕದವವರಂತೆಯೇ ಮನಬಂದಂತೆ ಓಡಾಡುವ ವರ್ತನೆಯನ್ನು ಪ್ರದರ್ಶಿಸಿದವು, ಮತ್ತು ಜರ್ಮನ್‌ರವರದು ಅವರಂತೆಯೇ ಕುಳಿತು ಆಲೋಚಿಸುವ ವರ್ತನೆಯನ್ನು ಪ್ರದರ್ಶಿಸಿದವು. ಈ ನಿರೂಪಣೆಯು ಆ ಕಾಲಘಟ್ಟದಲ್ಲಿ ಸೂಕ್ತವೆನಿಸಿರಬಹುದಾದರೂ, ಪ್ರಸ್ತುತದಲ್ಲಿ ಅರ್ಥಹೀನವಾಗಿದೆ. ಆದಾಗ್ಯೂ, ಅವರು ನಾವೆಲ್ಲರೂ ಸಂಸ್ಕೃತಿ ಬದ್ಧರೆಂದು ಮತ್ತು ನಾವು ವರ್ತನೆಯ ಅಧ್ಯಯನವನ್ನು ಪೂರ್ವಕಲ್ಪನೆಯೊಂದಿಗೆ ಮಾಡುತ್ತೇವೆ ಎಂದು ಒತ್ತಿ ಹೇಳಿದ್ದು ಸರಿಯಾಗಿಯೇ ಇದೆ. (ತತ್ವಜ್ಞಾನಿಗಳೂ ಸಹ ಹಾಗೆಯೇ ನೋಡುತ್ತಾರೆ. ಜನರ ಆಲೋಚನೆಯ ಬಗ್ಗೆ ಇರುವ ರಸೆಲ್‌ರ ಆಖ್ಯಾನವು ಬ್ರಿಟೀಷರಂತೆಯೇ, ರಸೆಲ್‌ರಂತೆಯೇ. ಈ ವಿಷಯದ ಬಗ್ಗೆ ಮಾವೊ ಸೇತ್ ನಾಂಗ್ ಅವರ ಆಲೋಚನೆಗಳು ಚೀನೀಯರಂತೆಯೇ ಇರುತ್ತವೆ. ಬೇರೆ ರೀತಿಯಾಗಿರಲು ಹೇಗೆ ಸಾಧ್ಯ?).

ಓದುಗರ ಬಗ್ಗೆ ನಾನು ಯಾವುದೇ ತಾಂತ್ರಿಕ ಜ್ಞಾನದ ಪೂರ್ವಕಲ್ಪನೆಯನ್ನು ಹೊಂದಿಲ್ಲ. ಶೂನ್ಯದಲ್ಲಿ ಚರ್ಚೆಯು ಮುಂದುವರೆಯಲು ಸಾಧ್ಯವಿಲ್ಲದ್ದರಿಂದ, ಕೆಲವೊಂದು ವಿದ್ಯಮಾನಗಳು ಮತ್ತು ನಿಯಮಗಳು ಉಪಯುಕ್ತವಾಗುವ ಮಟ್ಟಕ್ಕೆ ಚಿರಪರಿಚಿತವಾಗುತ್ತವೆಂದು ನಾನು ನಂಬುತ್ತೇನೆ. ಆದರೆ, ಪುಸ್ತಕವು ವರ್ತನಾ ವಿಜ್ಞಾನದ ಬಗ್ಗೆಯಲ್ಲದೆ ಅದರ ತತ್ವದ್ದಾಗಿರುವುದರಿಂದ ನಾನು ವೈಜ್ಞಾನಿಕ ವಿಷಯಗಳನ್ನು ಹೆಚ್ಚಾಗಿ ಬಳಸಿಲ್ಲ. ಕೆಲವು ಪದಗಳು ಬಹಳಷ್ಟು ಬಾರಿ ಕಂಡು ಬಂದರೂ, ಪುಸ್ತಕದಲ್ಲಿನ ವಿಷಯವು ಪುನರಾವರ್ತಿತಗೊಂಡಿದೆ ಎಂದು ಪರಿಗಣಿಸಲಾಗದು. ಉದಾಹರಣೆಗೆ, ಮುಂದಿನ ಅಧ್ಯಾಯಗಳಲ್ಲಿ "ಸಂಭವನೀಯ ಬಲವರ್ಧಕಗಳು" ಎಂಬ ಪದಗಳು ಬಹುತೇಕ ಪ್ರತೀ ಪುಟದಲ್ಲಿಯೂ ಕಂಡುಬರುತ್ತದೆ, ಆದರೆ ಅಧ್ಯಾಯಗಳು ಆಕಸ್ಮಿಕ ಸಂಭವನೆಗಳ ಕುರಿತದ್ದೇ ಆಗಿರುತ್ತವೆ. ಅಣಬೆ ಎಂಬುದು ವಿಷಯವಾದರೆ "ಅಣಬೆ" ಎಂಬ ಪದವು ಪದೇ ಪದೇ ಪುನರಾವರ್ತನೆಯಾಗಿರುತ್ತದೆ.

ಸಾಬೀತಾದ ಸಂಗತಿಗಳನ್ನು ಮೀರಿ ವಾದವು ಮುಂದುವರೆಯುತ್ತದೆ. ನನ್ನ ಕಾಳಜಿ ಇರುವುದು ಅರ್ಥವಿವರಣೆಯ ಬಗ್ಗೆಯೇ ಹೊರತು ಊಹೆ ಮತ್ತು ನಿಯಂತ್ರಣಗಳಲ್ಲ. ಪ್ರತೀ ವೈಜ್ಞಾನಿಕ ಕ್ಷೇತ್ರವು ಒಂದು ಎಲ್ಲೆಯನ್ನು ಹೊಂದಿದ್ದು, ಇದನ್ನು ಮೀರಿ, ಅವಶ್ಯಕವಾಗಿದ್ದರೂ, ನಾವು ಇಚ್ಛೆ ಪಡುವಷ್ಟರ ಮಟ್ಟಿಗೆ ಚರ್ಚೆ ನಿಖರವಾಗಿರುವುದಿಲ್ಲ. ಇತ್ತೀಚೆಗೆ ಬರಹಗಾರರೊಬ್ಬರು ಹೇಳಿದಂತೆ, "ಪ್ರಾಯೋಗಿಕ ಪರಿಶೀಲನೆಗೆ ಒಳಪಡಿಸಲಾಗದ ಕೇವಲ ಊಹೆಯು ವಿಜ್ಞಾನದ ಭಾಗವಾಗುವುದಿಲ್ಲ". ಆದರೆ ಅದು ನಿಜವಾಗಿದ್ದಲ್ಲಿ, ಉದಾಹರಣೆಗೆ, ಖಗೋಳಶಾಸ್ತ್ರ ಅಥವಾ ಪರಮಾಣು ಭೌತಶಾಸ್ತ್ರವು ವಿಜ್ಞಾನವಾಗುವುದಿಲ್ಲ. ವಾಸ್ತವವಾಗಿ, ವಿಷಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಬೇಕಾದ ವಿಧಾನವನ್ನು ರೂಪಿಸಲು ಊಹೆಯ ಅಗತ್ಯವಿದೆ.

ನೂರಾರು ಅಲ್ಲದಿದ್ದರೂ ಹತ್ತಾರು ಮನೋವಾದೀಯ ಉದಾಹರಣೆಗಳನ್ನು ನಾನು ಪರಿಗಣಿಸುತ್ತೇನೆ. ಇವೆಲ್ಲವನ್ನೂ ಪ್ರಸ್ತುತ ಬರವಣಿಗೆಯಿಂದ ಪಡೆಯಲಾಗಿದೆ. ಆದರೆ, ನಾನು ಅದರ ಮೂಲಗಳನ್ನು ಉಲ್ಲೇಖಿಸಿಲ್ಲ. ನಾನು ಬರಹಗಾರರೊಂದಿಗೆ ವಾದ ಮಾಡುತ್ತಿಲ್ಲ ಆದರೆ ಅವರ ಪದಗಳು ಮತ್ತು ಉದ್ಧೃತ ಭಾಗಗಳು ದೃಷ್ಟಾಂತ ನೀಡುತ್ತಿರುವ ಪರಿಪಾಠಗಳ ಬಗ್ಗೆ ವಾದಿಸುತ್ತಿದ್ದೇನೆ. ಆಂಗ್ಲ ಕೈಪಿಡಿಯಲ್ಲಿ ಬಳಸಿರುವಂತಹ ಉದಾಹರಣೆಗಳನ್ನೇ ನಾನು ಬಳಸುತ್ತೇನೆ. (ಲೇಖಕರು ತಮಗೆ ಕೃತಜ್ಞತೆ ಸೂಚಿಸಬೇಕೆಂದು ಬಯಸಿದ್ದಲ್ಲಿ ನಾನು ನನ್ನ ವಿಷಾದ ವ್ಯಕ್ತ ಪಡಿಸುತ್ತೇನೆ, ಆದರೆ ನಾನು ಸುವರ್ಣ ನಿಯಮವನ್ನು ಅನ್ವಯಿಸಿದ್ದೇನೆ. ಅಂದರೆ, ನಾನೇ ಅಂತಹ ಅಭಿವ್ಯಕ್ತಿಗಳನ್ನು ಬಳಸಿದ್ದಲ್ಲಿ ಇತರರು ಏನು ಮಾಡಬೇಕೆಂದು ಅಪೇಕ್ಷಿಸುತ್ತೇನೆಯೋ ಅದನ್ನೇ ನಾನು ಮಾಡಿದ್ದೇನೆ.) ಇಂತಹ ಹಲವಾರು ಅಭಿವ್ಯಕ್ತಿಗಳನ್ನು ನಾನು "ವರ್ತನೆಯೆಂದು ಪರಿಗಣಿಸುತ್ತೇನ". ಟ್ರೆಡ್ಯೂಟೋರಿ ಟ್ರೆಡಿಟೋರಿ (ಖಿಡಿಚಿಜಣಣಠಡಿ ಣಡಿಚಿಜಣಠಡಿ) –

ಭಾಷಾಂತರಕಾರರು – ವಿಶ್ವಾಸಘಾತುಕರು ಮತ್ತು ಮೂಲ ಸ್ವರೂಪಗಳ ಸೂಚ್ಯಾರ್ಥ ಮತ್ತು ಹಿನ್ನಲೆಗಳಿಗೆ ಯಾವುದೇ ನಿಖರವಾದ ವರ್ತನೆಯ ಸಮನಾದವು ಇಲ್ಲ ಅನ್ನುವುದನ್ನು ಗುರುತಿಸುತ್ತ ನಾನು ಹೀಗೆ ಮಾಡುತ್ತೇನೆ. ಚೇತನ, ಸಂಕಲ್ಪ, ಬಯಕೆಗಳು, ಉದಾತ್ತತೆ ಮತ್ತು ಇತ್ಯಾದಿಗಳ ನಿಖರ ಮರುವ್ಯಾಖ್ಯಾನಗಳಿಗೆ ಹೆಚ್ಚಿನ ಸಮಯ ವ್ಯಯಿಸುವುದು ಭೌತಶಾಸ್ತ್ರಜ್ಞರು ಈಥರ್, ಫ್ಲಜಿಸ್ಟನ್, ಅಥವಾ ವಿಸ್ ವೈವಾ ಗಳ ಮರುವ್ಯಾಖ್ಯಾನಗಳಿಗೆ ಸಮಯ ವ್ಯಯಿಸಿದಷ್ಟೇ ಅವಿವೇಕತನವಾಗುತ್ತದೆ.

ಅಂತಿಮವಾಗಿ, ನನ್ನ ಮೌಖಿಕ ನಡವಳಿಕೆಯ ಬಗ್ಗೆ ಹೇಳುತ್ತೇನೆ. ಆಂಗ್ಲ ಭಾಷೆಯು ಮನೋವಾದವನ್ನು ಅತಿಯಾಗಿ ಹೊಂದಿದೆ. ಮಾನವನ ವರ್ತನೆಯನ್ನು ವಿವರಿಸುವಲ್ಲಿ ಭಾವನೆಗಳು ಮತ್ತು ಮನಸ್ಸಿನ ಸ್ಥಿತಿಯು ಅಧಿಪತ್ಯವನ್ನು ಸಾಧಿಸಿವೆ ಮತ್ತು ಜನರು ಹೇಗೆ ಮತ್ತು ಏನನ್ನು ಭಾವಿಸುತ್ತಾರೆಂಬುದರಲ್ಲಿ ಮಗ್ನವಾಗಿರುವ ಸಾಹಿತ್ಯವು ಅದಕ್ಕೆ ನಿರಂತರವಾಗಿ ಬೆಂಬಲವನ್ನು ನೀಡುತ್ತಾ ಬಂದಿದೆ. ತತ್ಫಲವಾಗಿ, ಸಾಮಾನ್ಯ ಚರ್ಚೆಗಳು ಮನೋವಾದೀಯ ಸಿದ್ಧಾಂತಗಳನ್ನು ಉಲ್ಲೇಖಿಸದೇ ಪರಿಪೂರ್ಣವಾಗುವುದಿಲ್ಲ.ಪರಿಸರದ ಪಾತ್ರದ ಬಗ್ಗೆ ಬಹಳ ತಡವಾಗಿ ಕಂಡುಹಿಡಿಯಲಾಯಿತು ಮತ್ತು ಇಲ್ಲಿಯವರೆಗೂ ಜನಪ್ರಿಯ ಪದಪುಂಜಗಳು ಹೊರಹೊಮ್ಮಿಲ್ಲ.

ಅನಿಯತ ಚರ್ಚೆಗಳಲ್ಲಿ "ನಾನು ಚರ್ಚಿಸಲು ಆಯ್ಕೆ ಮಾಡಿಕೊಂಡಿರುವುದು....."(ಮುಕ್ತ ಆಯ್ಕೆಯ ಅವಕಾಶವನ್ನು ನಾನು ಪ್ರಶ್ನಿಸಿಕೊಂಡರೂ), ಅಥವಾ "ನನ್ನ ಮನಸ್ಸಿನಲ್ಲಿರುವುದು....."(ಮನಸ್ಸಿನ ಅಸ್ತಿತ್ವದ ಬಗ್ಗೆ ನಾನು ಪ್ರಶ್ನಿಸಿಕೊಂಡರೂ), ಅಥವಾ "ವಾಸ್ತವದ ಬಗ್ಗೆ ನನಗೆ ಅರಿವಿದೆ....." (ಅರಿವಿಗೆ ವಿಶೇಷ ವ್ಯಾಖ್ಯಾನವನ್ನು ನೀಡಿದರೂ), ಇಂತಹ ಅಭಿವ್ಯಕ್ತಿಗಳನ್ನು ಬಳಸಬಾರದೆಂದು ಅನಿಸುವುದಿಲ್ಲ. ಕೆಲವೊಮ್ಮೆ ಅನನುಭವಿ ವರ್ತನಾವಾದಿಗಳು ತಾವು ಮನೋವಾದೀಯ ಪರಿಭಾಷೆಯನ್ನು ಬಳಸುತ್ತಿರುವುದನ್ನು ಗಮನಿಸಿದಾಗ ಮುಜುಗರ ಪಟ್ಟುಕೊಳ್ಳುತ್ತಾರೆ. ಆದರೆ, ಪರಿಭಾಷೆಯನ್ನು ತಾಂತ್ರಿಕ ಚರ್ಚೆಗಳಲ್ಲಿ ಬಳಸಿದ್ದಾದರೆ ಈ ಮುಜಗರವನ್ನು ಸಮರ್ಥಿಸಬಹುದು. ವಿಚಾರವೊಂದರ ಸ್ಪಷ್ಟತೆಗೆ ತಾಂತ್ರಿಕ ಪದಪುಂಜವು ಅತ್ಯಗತ್ಯ. ಬಹುತೇಕವಾಗಿ ಇದು ಬಲವಂತದಿಂದ ಅಥವಾ ಸುತ್ತುಬಳಸಿ ಪ್ರಯೋಗಿಸಿರುವ ಪರಿಭಾಷೆ ಎಂದು ಭಾಸವಗಬಹುದು. ಹಳೆಯ ರೀತಿಯಲ್ಲಿ ಮಾತನಾಡುವುದನ್ನು ವಿಷಾದದೊಂದಿಗೆ ತ್ಯಜಿಸಲಾಗುತ್ತದೆ ಮತ್ತು ಹೊಸದೆಲ್ಲವೂ ಸಮಸ್ಯಾತ್ಮಕ ಮತ್ತು ಅಹಿತಕರದ್ದಾಗಿದೆ. ಆದರೆ, ಬದಲಾವಣೆಯನ್ನು ಮಾಡಲೇಬೇಕಾಗುತ್ತದೆ.

ವಿಜ್ಞಾನವು ಇಂತಹ ಪರಿವರ್ತನೆಯಿಂದ ತೊಂದರೆಗೀಡಾಗಿರುವುದು ಇದೇ ಮೊದಲ ಬಾರಿಯಲ್ಲ.ಖಗೋಳಶಾಸ್ತ್ರಜ್ಞರು ಜ್ಯೋತಿಷಿಗಳಂತೆ (ಅಥವಾ ವೈಯಕ್ತಿಕ ಜೀವನದಲ್ಲಿ ಜೋತಿಷಿಯಾಗಿ) ಭಾಸವಾಗದಿರುವುದು ಕಷ್ಟಕರವಾದ ಕಾಲಘಟ್ಟಗಳಿದ್ದವು ಮತ್ತು ರಸಾಯನ ಶಾಸ್ತ್ರಜ್ಞರು ತಮ್ಮ ರಸವಿದ್ಯೆಯಿಂದ ಯಾವುದೇ ರೀತಿಯಲ್ಲಿ ಸ್ವತಂತ್ರರಾಗಿರಲಿಲ್ಲ. ವರ್ತನಾ ವಿಜ್ಞಾನದಲ್ಲಿ ನಾವೂ ಅಂತಹುದೇ ಹಂತದಲ್ಲಿದ್ದೇವೆ ಮತ್ತು ಸಂಕ್ರಮಣವು ಎಷ್ಟು ಬೇಗ ಮುಕ್ತಾಯವಾಗುತ್ತದೋ ಅಷ್ಟು ಒಳ್ಳೆಯದು. ವಾಸ್ತವ ಪರಿಣಾಮಗಳನ್ನು ಸುಲಭವಾಗಿ ವ್ಯಕ್ತಪಡಿಸಬಹುದು. ಮಾನವ ವ್ಯವಹಾರಗಳಾದ ಶಿಕ್ಷಣ, ರಾಜಕೀಯ, ಮನೋರೋಗ ಚಿಕಿತ್ಸೆ, ದಂಡನಶಾಸ್ತ್ರ, ಮತ್ತು ಇತರ ಹಲವಾರು ಕ್ಷೇತ್ರಗಳು ಸಾಮಾನ್ಯ ಪದಪುಂಜದ ಸಾರಸಂಗ್ರಹಿಕ ಬಳಕೆಯಿಂದ ಬಳಲುತ್ತಿವೆ. ಸೈದ್ಧಾಂತಿಕ ಪರಿಣಾಮಗಳನ್ನು ವ್ಯಕ್ತಪಡಿಸುವುದು ಕಷ್ಟಕರವಾಗಿದ್ದರೂ ಅದು ಅಷ್ಟೇ ಮುಖ್ಯವಾದದ್ದೆಂದು ಮುಂದಿನ ಅಧ್ಯಯಗಳಲ್ಲಿ ನಾನು ತೋರಿಸಲು ಆಶಿಸುತ್ತೇನೆ.